**13** ಗುರು ಗೋವಿಂದಸಿಂಗರ ಸಹಾಯದಿಂದ ಬಹಾದುರ್‌ಶಾ ಜಯ ಗಳಿಸಿದ, ಮತ್ತು ದೆಹಲಿಯ ಸಿಂಹಾಸನ ಏರಿದ.

ಬಾದಶಹರೆ ! ಒಬ್ಬ ಮುಸ್ಲಿಂ ಕಾರ್ಮಿಕ ಗುರು ಗೋವಿಂದ ಸಿಂಗರನ್ನು ಬೆನ್ನಲ್ಲಿ ಇರಿದಿದ್ದಾನೆ. ಅವರು ಈಗ ನಾಸಿಕದಲ್ಲಿದ್ದಾರೆ.



ಓ ಹಾಗೇನು, ತಕ್ಷಣ ಅವರ ಬಳಿಗೆ ತಜ್ಞ ವೈದ್ಯರನ್ನು ಕಳುಹಿಸಿ.

**14** ದೆಹಲಿಯ ವೈದ್ಯರಿಗೆ ಗುರು ಗೋವಿಂದಸಿಂಗರನ್ನು ಉಳಿಸಲಾಗಲಿಲ್ಲ. ಅವರ ಅಂತ್ಯ ಸಮೀಪಿಸುತ್ತಿತ್ತು.

"ನನಗೆ ಯಾವ ಸಂಸ್ಕಾರವನ್ನೂ ಮಾಡಬೇಡಿ. ಸಿಖ್ಖರ ವೇದ ಎನಿಸಿರುವ 'ಗ್ರಂಥಸಾಹೇಬ' ವನ್ನು ೪೦ ದಿನಗಳ ಕಾಲ ಓದಿ, ಅಷ್ಟೇ ಸಾಕು."

ಅಂದಿನಿಂದ 'ಗ್ರಂಥ ಸಾಹೇಬ'ವೇ ಸಿಖ್ಖರ ಗುರುವಾಯಿತು.



**15** ಹೀಗೆ ಹೇಳಿ ಗುರು ಗೋವಿಂದಸಿಂಗರು ಸ್ನಾನಮಾಡಿದರು; ಶುದ್ಧವಾದ ಬಟ್ಟೆಗಳನ್ನು ಹಾಕಿಕೊಂಡು ತಮ್ಮ ಬಿಡಾರದೊಳಗೆ ಹೋದರು.

ನಾನು ಧ್ಯಾನ ಮಾಡಲು ಕುಳಿತುಕೊಳ್ಳುತ್ತೇನೆ, ಯಾರೂ ಒಳಗೆ ಬರಬೇಡಿ.



**16** ಬಹಳ ಹೊತ್ತಾದರೂ ಗೋವಿಂದಸಿಂಗರು ಹೊರಗೆ ಬರುವ ಸೂಚನೆಯೇ ಕಾಣಲಿಲ್ಲ. ಇದ್ದಕ್ಕಿದ್ದಂತೆ ಅವರು ಇದ್ದ ಬಿಡಾರ ಕುಸಿಯಿತು. ಅದು ಬೆಂಕಿಯಲ್ಲಿ ಸುಟ್ಟುಹೋಯಿತು. ಅಲ್ಲಿ ಹೊರಗೆ ಇದ್ದವರೆಲ್ಲ ಇದನ್ನು ನೋಡಿದರು.

ಆ ಜಾಗದಲ್ಲಿ ಈಗ ಒಂದು ಗುರುದ್ವಾರವಿದೆ. ಅದು ಸಿಖ್ಖರ ದೇವಾಲಯ. ಗುರು ಗೋವಿಂದಸಿಂಗರು ಲೀನವಾದ ಪವಿತ್ರ ಜಾಗವದು.

